# ಜ್ಞಾನಶಕ್ತಿ
ಮಾಸ ಪತ್ರಿಕೆ

JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಸಂಪುಟ - 14 Reg. No. : KARBIL / 2005 / 16123 ಜನವರಿ - 2025 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 01 ಪ್ರಕಟಣೆ : 25-01-2025


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ



ಮುಂಬೈ ನಿವಾಸಿ ದಿ| ಶ್ರೀಪತಿ ರಾವ್ ಇವರ ಸ್ಮರಣಾರ್ಥ ಅವರ ಪತ್ನಿ ಶ್ರೀಮತಿ ಶ್ರೀವಲ್ಲಿ ಶ್ರೀಪತಿ ರಾವ್, ಪುತ್ರರಾದ ಶ್ರೀ ಶ್ರೀಕಾಂತ್ ರಾವ್, ಶ್ರೀ ಶ್ರೀನಾಥ್ ರಾವ್ ಇವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ₹ 1,00,000/- (ರೂಪಾಯಿ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಮುಟ್ಟತೋಡಿ ಶ್ರೀ ಸುಬ್ರಾಯ ಶಾನುಭೋಗ್ ಇವರ ಸ್ಮರಣಾರ್ಥ ಪತ್ನಿ ಶ್ರೀಮತಿ ಶೀಲಾ ಶಾನುಭೋಗ್, ಪುತ್ರ ಡಾ. ಗಿರೀಶ್ ಯಂ., ಸೊಸೆ ಡಾ. ಸೋನಲ್ ಭಟ್, ಮೊಮ್ಮಗ ಚಿ| ನಿಹಾಲ್‌ರವರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ₹ 1,00,000/- (ರೂಪಾಯಿ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.





ಅಮೇರಿಕಾದ ಡಲ್ಲಾಸ್‌ನಲ್ಲಿ ನೆಲೆಸಿರುವ ಶ್ರೀ ಸಂದೀಪ್ ಮತ್ತು ಶ್ರೀಮತಿ ಶ್ರುತಿ (ಶ್ರೀಮತಿ ಪ್ರಭಾ ಮತ್ತು ಶ್ರೀ ಕಾಂತಾವರ ಪ್ರಭಾಕರ್ ರಾವ್ ಇವರ ಪುತ್ರಿ) ದಂಪತಿಗಳು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ₹ 1,00,000 (ರೂಪಾಯಿ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### 'ಸ್ಕೋಲರ್ಸ್ ಡೇ - 2025

ಭಾನುವಾರ 2, ಫೆಬ್ರವರಿ 2025

ಬೆಳಗ್ಗೆ ಗಂಟೆ 8.30ರಿಂದ 10.15 : ಉಪಾಹಾರ ಮತ್ತು ನೋಂದಾವಣೆ

ಬೆಳಗ್ಗೆ ಗಂಟೆ 10.30ರಿಂದ 11.00 : ಉದ್ಘಾಟನಾ ಕಾರ್ಯಕ್ರಮ



ದೀಪ ಪ್ರಜ್ವಲನ



ಸ್ವಾಗತ ಭಾಷಣ :

ಡಾ. ಎ. ಪಿ. ಕೃಷ್ಣ

ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

ಅಧ್ಯಕ್ಷತೆ :

ಶ್ರೀ ಹರ್ಷಕುಮಾರ್ ಕೇದಿಗೆ

ನಿಕಟಪೂರ್ವ ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

**SESSION I** ಬೆಳಗ್ಗೆ ಗಂಟೆ 11-00ರಿಂದ 11-30ರ ವರೆಗೆ

ಪ್ರಧಾನ ಭಾಷಣ : ಶ್ರೀ ಭಾಗ್ಯಚಂದ್ರ ರಾವ್, Former MD Kennametal India Ltd.

ವಿಷಯ : India is shining - your sweet spot on opportunities

**SESSION II** ಬೆಳಗ್ಗೆ ಗಂಟೆ 11-30ರಿಂದ ಮಧ್ಯಾಹ್ನ ಗಂಟೆ 12-00ರ ವರೆಗೆ

ಪ್ರಧಾನ ಭಾಷಣ : ಶ್ರೀ ಧನಂಜಯ ರಾವ್ Senior Advocate, Belthangady

ವಿಷಯ : 'ನಮ್ಮ ನಡೆ ಯಶಸ್ಸಿನೆಡೆಗೆ'

ಮಧ್ಯಾಹ್ನ ಗಂಟೆ 12-00ರಿಂದ 12-30ರ ವರೆಗೆ : ಸಮೂಹ ಚರ್ಚೆ

Moderation : ಶ್ರೀ ಇನ್ನಾ ಚಂದ್ರಕಾಂತ ರಾವ್

ಮಧ್ಯಾಹ್ನ ಗಂಟೆ 12-30ರಿಂದ 1-00ರ ವರೆಗೆ : ವಿದ್ಯಾರ್ಥಿ ವೇತನ ವಿತರಣೆ

ಧನ್ಯವಾದ ಸಮರ್ಪಣೆ : ಶ್ರೀ ನಾಗರಾಜ ಶರ್ಮ

ಮಧ್ಯಾಹ್ನ ಗಂಟೆ 1-00ರಿಂದ 2-00ರ ವರೆಗೆ : ಭೋಜನ

**ವಿಶೇಷ ಸೂಚನೆ**

- ಸ್ಕೋಲರ್‌ಶಿಪ್ ಪಡೆಯುವ ವಿದ್ಯಾರ್ಥಿಗಳು ಬೆಳಗ್ಗೆ ಗಂಟೆ 10-15ರ ಮೊದಲು ತಮ್ಮ ಹೆಸರನ್ನು ಕೌಂಟರ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು.
- ತಡವಾಗಿ ಬಂದ ವಿದ್ಯಾರ್ಥಿಗಳಿಗೆ ಸ್ಕೋಲರ್‌ಶಿಪ್‌ನ್ನು ಕೊಡಲಾಗುವುದಿಲ್ಲ.

## ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ :

• ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು

• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ •ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು : •ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಡಾ. ಎ. ಪಿ. ಕೃಷ್ಣ

: 7795116598 ✆ : 9343361618 e-mail : jnanashakthisss@gmail.com

## ಪುತ್ತೂರು 'ಶಿವಸದನ'ಕ್ಕೆ ಕೊಡುಗೆ



ಪುತ್ತೂರು ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿ ನಿಲಯ 'ಶಿವಸದನ'ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆವಶ್ಯವಿದ್ದ ಸುಮಾರು ₹ 18,000/– ಮೌಲ್ಯದ ಧ್ವನಿವರ್ಧಕ, ಎರಡು ಮೈಕ್ ಮತ್ತು ಎರಡು ಸ್ಟಾಂಡ್‌ನ್ನು ಖರೀದಿಸಲಾಯಿತು. ಇದಕ್ಕೆ ಧನಸಹಾಯ ನೀಡಿದರು ಮಂಗಳೂರು ಕುಂಜತ್ತಬೈಲ್ ನಿವಾಸಿ ಶ್ರೀಮತಿ ರತ್ನ ರಾಜೇಂದ್ರ ರಾವ್ ಇವರ ಪುತ್ರಿ ಶ್ರೀಮತಿ ಶೋಭಿತ ಸಮೀರ್ ದಾಮ್ಲೆ ₹ 10,000, ಶ್ರೀ ಬಿ. ಶಾಂತಾರಾಮ್ ಶಾಸ್ತ್ರೀ ಮತ್ತು ಶ್ರೀಮತಿ ಮೀರಾ ಶಾಸ್ತ್ರಿ ₹ 5,000/–, ಶ್ರೀಮತಿ ಶಕುಂತಲಾ ವಿಜಯಕುಮಾರ್ ರಾವ್ ₹ 3,000/– ಈ ಉಪಕರಣವನ್ನು ಭಜನಾ ಗುರುಗಳಾದ ಶ್ರೀ ಸುಬ್ಬರಾವ್ ಪೊಳಲಿ ಮತ್ತು ಶ್ರೀ ಸುಬ್ರಹ್ಮಣ್ಯ ಸಭಾ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ದಾನಿಗಳ ಪರವಾಗಿ ಶ್ರೀಮತಿ ರತ್ನ ರಾಜೇಂದ್ರ ಇವರಿಂದ ಸ್ವೀಕರಿಸಿದರು.

## ಶ್ರೀಗುರುಗಳ ಆಶೀರ್ವಾದ ಫಲ ಮಂತ್ರಾಕ್ಷತೆ ಸ್ವೀಕಾರ



ಹೋಟೆಲ್ ಸ್ವಾಗತದ ಮ್ಹಾಲಕರಾದ ಶ್ರೀ ಶ್ರೀಪತಿ ರಾವ್ ಹಾಗೂ ಶ್ರೀಮತಿ ಹರಿಣಿ ಶ್ರೀಪತಿ ರಾವ್ ದಂಪತಿಗಳ 22ನೇ ವರುಷದ ಮದುವೆ ದಿನದ ಸುಸಂದರ್ಭದಲ್ಲಿ ವಿಶೇಷವಾಗಿ ಶೃಂಗೇರಿಗೆ ಹೋಗಿ ಗುರುಗಳ ಆಶೀರ್ವಾದ ಫಲ–ಮಂತ್ರಾಕ್ಷತೆ ಸ್ವೀಕರಿಸಿ ಹಿರಿಯರ ಆಶೀರ್ವಾದ ಸ್ವೀಕರಿಸಲು ಶಿವಸದನದ ಹಿರಿಯರಿಗೆಲ್ಲ ವಿಶೇಷ ಭೋಜನ ಏರ್ಪಡಿಸಿದ್ದರು. ಶ್ರೀ ಸಭಾದ ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ, ಶ್ರೀಮತಿ ಗಾಯತ್ರಿ ಅರವಿಂದ್ ಕೇದಿಗೆ, ಶ್ರೀಮತಿ ರೂಪ ಕೇದಿಗೆ, ಕು. ವಂದನ ರಾಣಿ ಕೇದಿಗೆ ಹಾಗೂ ಪುತ್ತೂರಿನ ಮಹನೀಯರು ಎಲ್ಲಾ ವ್ಯವಸ್ಥೆಗಳಲ್ಲಿ ಸಹಕರಿಸಿದರು.

*ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*

## ಸನ್ಮಾನ



ಶ್ರೀ ಪೂಮಾಣಿ–ಕಿನ್ನಿಮಾಣಿ (ಉಳ್ಳಾಕುಲು) ವ್ಯಾಘ್ರ ಚಾಮುಂಡಿ (ರಾಜನ್ ದೈವ) ದೈವಸ್ಥಾನ ಪಡುಮಲೆ ದೈವಗಳ ನೇಮೋತ್ಸವ ಸಂದರ್ಭದಲ್ಲಿ ತಾರೀಕು 18–01–2025ರಂದು ಸಾಂಸ್ಕೃತಿಕ ವೇದಿಕೆ ಪಡುಮಲೆ ಇದರ ವತಿಯಿಂದ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಸೇರಿ 35 ವರ್ಷಗಳ ಸೇವೆಯನ್ನು ಸಲ್ಲಿಸಿರುವ ದಿ। ಭಾಸ್ಕರ ರಾವ್ ಇವರನ್ನು ಗುರುತಿಸಿ ಇವರಿಗೆ ಸಲ್ಲಲಿರುವ ಸನ್ಮಾನವನ್ನು ಇವರ ಪುತ್ರ ಶ್ರೀ ಮನೋಜ್ ಕುಮಾರ್ ಪಡುಮಲೆ ಇವರು ಸ್ವೀಕರಿಸಿದರು.

## ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತ ನೂತನ ಮಂಡಳಿಯಿಂದ ಜಗದ್ಗುರು ಶೃಂಗೇರಿ ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರಿಂದ ಅನುಗ್ರಹಿತರಾಗಿ ಫಲಮಂತ್ರಾಕ್ಷತೆ ಸ್ವೀಕಾರ



ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ನೂತನ ಆಡಳಿತ ಮಂಡಳಿ ಸದಸ್ಯರು ಅಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ನೇತೃತ್ವದಲ್ಲಿ ಶೃಂಗೇರಿಗೆ ತೆರಳಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಆಶೀರ್ವಾದ ಪಡೆದರು. ಗುರುಗಳು 'ನೂತನ ಆಡಳಿತ ಮಂಡಳಿಯ ಅವಧಿಯಲ್ಲಿ ಶ್ರೀ ಸಭಾದಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಗಳು ನಡೆಯಲಿ' ಎಂದು ಅನುಗ್ರಹಿಸಿ ಫಲ, ಮಂತ್ರಾಕ್ಷತೆ ನೀಡಿದರು. ಶ್ರೀ ಕರುಣ್ ರಾವ್ ಬೆಳ್ಳೆಯವರು ಉಪಸ್ಥಿತರಿದ್ದು ವ್ಯವಸ್ಥೆಯಲ್ಲಿ ಸಹಕರಿಸಿದರು.

## ಕುಮಾರಿ ಅದ್ವಿತಿ ರಾವ್ ಅವರಿಂದ ಗೀತಾ ಜ್ಞಾನ ಯಜ್ಞ



ದಿನಾಂಕ 01–12–2024ರ ಆದಿತ್ಯವಾರ ಶೃಂಗೇರಿ ಜಗದ್ಗುರುಗಳ ಸನ್ನಿಧಿಯಲ್ಲಿ ನಡೆದ ಭಗವದ್ಗೀತೆಯ 18ನೆಯ ಅಧ್ಯಾಯದ 700 ಶ್ಲೋಕದ ಕಂಠಪಾಠ ಪರೀಕ್ಷೆ (ಗೀತಾ ಜ್ಞಾನ ಯಜ್ಞ) ಇದರಲ್ಲಿ ಬೆಳ್ತಂಗಡಿ ಸ್ಥಾನಿಕ ಸಮಾಜದ **ಕುಮಾರಿ ಅದ್ವಿತಿ ರಾವ್** ಪ್ರಥಮ ಶ್ರೇಣಿಯನ್ನು ಪಡೆದು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಯವರ ಆಶೀರ್ವಾದ ಪಡೆದಿದ್ದಾಳೆ. ಬೆಳ್ತಂಗಡಿ ಶ್ರೀಮತಿ ಅಖಿಲಾ ಮತ್ತು ಶ್ರೀ ಅಶ್ವತ್ಥ್ ಅವರ ಪುತ್ರಿ ಹಾಗೂ ಎಸ್.ಡಿ.ಎಮ್. ಆಂಗ್ಲ ಮಾಧ್ಯಮ ಶಾಲೆ, ಉಜಿರೆಯ 6ನೇ ತರಗತಿಯ ವಿದ್ಯಾರ್ಥಿನಿಯಾಗಿದ್ದಾಳೆ.

## ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯದಲ್ಲಿ ಮನೋರಂಜನಾ ಕಾರ್ಯಕ್ರಮ



ಬೆಂಗಳೂರು ಜಯನಗರ ನಿವಾಸಿ ಉಡುಪಿಯ ಬೈಲಕೆರೆ ಗೋವಿಂದ ರಾವ್ ತಮ್ಮ ಮಾತೃಶ್ರೀ ದಿ। ಲಕ್ಷ್ಮಿಯವರ ಸ್ಮರಣಾರ್ಥ ಪುತ್ತೂರಿನ ಮುರದ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯದಲ್ಲಿ ನಿವಾಸಿಗಳಿಗೆ ವಿಶೇಷ ಖಾದ್ಯಗಳನ್ನೊಳಗೊಂಡ ಭೋಜನವನ್ನು ಮತ್ತು ಹಣ್ಣುಗಳನ್ನು ಪ್ರಾಯೋಜಿಸಿದ್ದರು. ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯದ ಸುಮಾರು 50 ಮಂದಿ ಪ್ರಶಿಕ್ಷಣಾರ್ಥಿಗಳು ಅಧ್ಯಾಪಿಕೆಯರೊಂದಿಗೆ ಮನೋರಂಜನಾ ಕಾರ್ಯಕ್ರಮವನ್ನು ನೀಡಿದರು.

ಹೋಟೆಲ್ ಸ್ವಾಗತದ ಮ್ಹಾಲಕರೇ ಸ್ವತಃ ದಂಪತಿಸಮೇತ ಆಗಮಿಸಿದ್ದು ವಿಶೇಷ. ಶ್ರೀ ದಿನಕರ್ ರಾವ್, ಶ್ರೀ ಸತ್ಯನಾರಾಯಣ ರಾವ್, ಶ್ರೀಮತಿ ವನಿತಾ ರಾವ್, ಶ್ರೀಮತಿ ಶಕುಂತಲಾ ರಾವ್ ಸಿಬ್ಬಂದಿ ವರ್ಗದವರೆಲ್ಲರೂ ಭೋಜನಾ ವಿತರಣೆಯಲ್ಲಿ ಸಹಕರಿಸಿದರು. ಪುತ್ತೂರಿನ ಶ್ರೀ ದಿನಕರ ರಾವ್ ಧನ್ಯವಾದವನ್ನು ಅವರದ್ದೇ ಶೈಲಿಯಲ್ಲಿ ನೀಡಿದರು. ವಿವೇಕಾನಂದ ಕಾಲೇಜಿನ ಪ್ರಿನ್ಸಿಪಾಲ್ ಶ್ರೀಮತಿ ಶೋಭಿತಾ ಸತೀಶ್‌ರವರಿಗೆ ತನ್ನ ವಿದ್ಯಾರ್ಥಿಗಳಿಂದ ಇಷ್ಟು ಸುಂದರ ಮನೋರಂಜನಾ ಕಾರ್ಯಕ್ರಮವನ್ನು ನೀಡಲು ಅನುವು ಮಾಡಿದ್ದಕ್ಕೆ ಕೃತಜ್ಞತೆ ಸಲ್ಲಿಸಿದರು.

NAVADURGA FINANCIALS
Estd 1998
SCAN ME TO KNOW MORE!!!

# ವಿವಾಹ ವಾರ್ಷಿಕೋತ್ಸವ



ಬೆಂಗಳೂರು ನಿವಾಸಿ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ, ಬೆಂಗಳೂರು ಸಂಘದ ಅಧ್ಯಕ್ಷರಾದ ಶ್ರೀ ಬಿ. ರವೀಂದ್ರನಾಥ ರಾವ್ ದಂಪತಿಗಳು ತಮ್ಮ 62ನೆಯ ಮದುವೆಯ ವಾರ್ಷಿಕೋತ್ಸವವನ್ನು ಪುತ್ತೂರಿನ 'ಶಿವಸದನ'ದಲ್ಲಿ ಬಹು ಸಂಭ್ರಮದಿಂದ ಆಚರಿಸಿದರು. ಪುತ್ರ, ಮೊಮ್ಮಗ, ಕುಟುಂಬಸ್ಥರು, ಬಂಧುಗಳು, ಸಣ್ಣ ಸಣ್ಣ ಆಟಗಳನ್ನು ಹಿರಿಯರಿಗೆ ಆಡಿಸಿ, ರುಚಿಕರವಾದ ಭೋಜನವನ್ನು ಎಲ್ಲಾ ನಿವಾಸಿಗಳೊಂದಿಗೆ ಸಂಭ್ರಮದಿಂದ ಸವಿದರು. ಪುತ್ತೂರಿನಿಂದ ಶ್ರೀ ಸತ್ಯನಾರಾಯಣ ರಾವ್, ಶ್ರೀ ದಿನಕರ್ ರಾವ್, ಶ್ರೀಮತಿ ಕವಿತಾ ರಾವ್, ಬೆಂಗಳೂರಿನಿಂದ ಶ್ರೀ ಚಂದ್ರಕಾಂತ್ ರಾವ್ ತಮ್ಮ ಮಕ್ಕಳು, ಮೊಮ್ಮಕ್ಕಳೊಂದಿಗೆ ಸಮಾರಂಭದಲ್ಲಿ ಭಾಗಿಯಾಗಿದ್ದರು.

ವರದಿ : ***ಶ್ರೀಮತಿ ಸುಮಂಗಲಾ ಪ್ರಭಾಕರ್***

# ಸ್ಮೃತಿ - ಸ್ತುತಿ




ಮಂಗಳೂರು ನಿವಾಸಿ ಮತ್ತು ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ತನ್ನ ಪತಿ ಶ್ರೀ ಪಿ. ಎಸ್. ಪ್ರಭಾಕರ್ ನೆನಪಿನಲ್ಲಿ ಪುತ್ತೂರಿನ ಶಿವಸದನದಲ್ಲಿ ಪೊಳಲಿ ಶ್ರೀ ಸುಬ್ಬರಾವ್ ನೇತೃತ್ವದಲ್ಲಿ ಸುಮಾರು ಒಂದು ಗಂಟೆಯ ಭಜನಾ ಕಾರ್ಯಕ್ರಮ ಶ್ರೀ ಶಾರದಾಂಬಾ ಭಜನಾ ಮಂಡಳಿ, ಶ್ರೀ ಸುಬ್ರಹ್ಮಣ್ಯ ಸಭಾ ಹಾಗೂ ಶಿವರಂಜಿನಿ ಕಲಾಕೇಂದ್ರ ಪೊಳಲಿ / ಬೊಕ್ಕಸದ ಸದಸ್ಯರಿಂದ ಅತ್ಯಂತ ಭಕ್ತಿಪೂರ್ವಕವಾಗಿ ಜರಗಿತು. ಭಜನೆ ನಡೆಯುವ ಸ್ಥಳದಲ್ಲಿ ದೇವರ ಸಾನ್ನಿಧ್ಯವಿರುತ್ತದೆ ಎಂಬಂತೆ ಹಿರಿಯರು ವಿಶೇಷಚೇತನರು ಇರುವ ಜಾಗದಲ್ಲಿ ಈ ಕಾರ್ಯಕ್ರಮವು ರುಚಿಕರವಾದ ವಿಶೇಷ ಭೋಜನದೊಂದಿಗೆ ಮುಕ್ತಾಯಗೊಂಡಿತು.

ಇದರಲ್ಲಿ ಭಜನಾ ಸದಸ್ಯರಲ್ಲದೆ ಎಲ್ಲಾ ಹತ್ತಿರದ ಬಂಧು–ಮಿತ್ರರು, ಸುಬ್ರಹ್ಮಣ್ಯ ಸದನದ ಸದಸ್ಯರು, ಪುತ್ತೂರಿನ ಬಂಧುಗಳು, ಶಿವಸದನದ ಎಲ್ಲಾ ನಿವಾಸಿಗಳು, ಸಿಬ್ಬಂದಿ ವರ್ಗದವರು, ವಿಶೇಷಚೇತನರ ಅಧ್ಯಾಪಕ ವೃಂದ ಎಲ್ಲರೂ ಒಂದುಗೂಡಿ ಆ ಕ್ಷಣವು ಒಂದು ಮರೆಯಲಾರದ ದಿನವಾಗಿರುತ್ತದೆ. ಈ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ನನ್ನ ಎಲ್ಲಾ ಪ್ರೀತಿಪಾತ್ರರಿಗೂ ಮುಖ್ಯವಾಗಿ ನಮ್ಮ ಶಿವಸದನದ ಎಲ್ಲಾ ಕಾರ್ಯಕ್ರಮ ಪ್ರಸ್ತುತಪಡಿಸಲು ನಮ್ಮೊಂದಿಗೆ ಸಹಕರಿಸುವ ಕು| ಡಾ. ಗಾನ ಇವರಿಗೂ ಪ್ರೀತಿಪೂರ್ವಕ ಧನ್ಯವಾದಗಳು.

– ***ಶ್ರೀಮತಿ ಸುಮಂಗಲಾ ಪ್ರಭಾಕರ್***




**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR



*Freelance Makeup & Hairstyle Artistry*
*Swapna_rao_makeoverartistry*
BRIDAL / PRE / POST WEDDING FUNCTIONS /
OTHER PERSONAL EVENTS & PARTIES
Rental Jewellery / Saree Pre-pleating Service available
For Bookings and Enquiries
*Swapna Vallish* : 9972465209 / 7892235761

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

'ಶ್ರೀ ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು **- 575 003**

**ಶಾಖೆಗಳು** ✆ : **9880968032 / 0824-2982095**


ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ
✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ
✆ : 08251 - 235895 / 8123659955
ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು)
✆ : 08256 - 234076 / 8867269944
ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803
ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು
ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್
✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು
✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ
✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ
✆ : 08258 - 200161 / 8147549955
ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ
✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ
✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ
✆ : 8197677575
ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967
ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ
✆ : 9741443470
ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು
✆ : 9740925733
ಕೋಡಿಕ್ಕಲ್ : ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು
✆ : 9945916755

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | |
|---|---|
| 45 ದಿನಗಳಿಂದ 180 ದಿನಗಳ ವರೆಗೆ | - 5% |
| 181 ದಿನಗಳಿಂದ 364 ದಿನಗಳ ವರೆಗೆ | - 6% |
| 1 ವರ್ಷದಿಂದ 3 ವರ್ಷದ ವರೆಗೆ | - 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**
ಕನಿಷ್ಠ ಠೇವಣಿ : ರೂ. **10,000/-** ಠೇವಣಿ ಅವಧಿ : **88** ತಿಂಗಳು
ವಿಶೇಷ ಬಡ್ಡಿದರ : **9.6%**



Prop. : SUDHAKAR BELLE
✆ : 9845193103/ 9481563103
**KARAN DIGITAL STUDIO**
Sadasukh Building, Nr. Postoffice, Padubidri - 574 111
Opp. Busstand, Belman
All Marriage & Other functions
Photography & Videography Available

ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್** ಹಾಗೂ
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
ಮತ್ತು **ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

# ಬ್ರಹ್ಮೋಪದೇಶ

ಶ್ರೀ ಕೇಶವ ಶರ್ಮ ಮತ್ತು ಶ್ರೀಮತಿ ಸುಮಾ ಬಿ. ಎಸ್. ಇವರ ಸುಪುತ್ರ **ಚಿ| ಸಾರ್ಥಕ್**‌ನ ಬ್ರಹ್ಮೋಪದೇಶ ತಾ. 25–12–2024ನೇ ಬುಧವಾರ ಬೆಂಗಳೂರಿನ ಜ್ಞಾನಶಕ್ತಿ ಮಂಟಪದಲ್ಲಿ ನಡೆಯಿತು.

❖ ❖ ❖

ಶ್ರೀಮತಿ ವಾಣಿ ಮತ್ತು ಶ್ರೀ ಆಳುಗ್ಗೇಲು ಶ್ರೀ ಸರ್ವೇಶ್ ರಾವ್ ಇವರ ಸುಪುತ್ರ **ಚಿ| ಸವಿರ್** ಬ್ರಹ್ಮೋಪದೇಶ ತಾ. 22–12–2024ನೇ ರವಿವಾರ ಉಡುಪಿಯ 'ಸರಸ್ವತಿ ಸಭಾಭವನ'ದಲ್ಲಿ ನಡೆಯಿತು.

❖ ❖ ❖

ಶ್ರೀ ಅಶೋಕ ಎನ್. ರಾವ್ ಮತ್ತು ಶ್ರೀಮತಿ ಸುಮಿತ ಇವರ ಪುತ್ರ **ಚಿ| ಆರ್ಯನ್** ಇವನ ಬ್ರಹ್ಮೋಪದೇಶ ಕಾರ್ಯಕ್ರಮವು ತಾ. 22–12–2024ನೇ ಆದಿತ್ಯವಾರ 'ಮಂಗಳೂರಿನ ಸಿ. ವಿ. ನಾಯಕ್ ಹಾಲ್'ನಲ್ಲಿ ನಡೆಯಿತು.

❖ ❖ ❖

ಶ್ರೀ ರವಿಕಿರಣ್ ಮಂಕುಡೆ ಮತ್ತು ಶ್ರೀಮತಿ ನೇಹಾರವರ ಸುಪುತ್ರ **ಚಿ| ವಿಹಾನ್** ಇವನ ಉಪನಯನ ತಾ. 6–1–2025ನೇ ಸೋಮವಾರ ಬೆಂಗಳೂರಿನ ಇಸ್ಕಾನ್ 'ದ್ವಾರಕಾಪುರಿ ಹಾಲ್'ನಲ್ಲಿ ನಡೆಯಿತು.




ಶ್ರೀಮತಿ ಭಾರತಿ ಮತ್ತು ಶ್ರೀ ಉದಯ ಕುಮಾರ್ ಎಸ್. ಇವರ ಪುತ್ರ **ಚಿ| ಶರದ್** ಹಾಗೂ ಶ್ರೀಮತಿ ಉದಯ ಮತ್ತು ಶ್ರೀ ಬಿ. ಶ್ರೀಧರ್ ಭಟ್ ಇವರ ಪುತ್ರಿ **ಚಿ| ಸೌ| ಪಲ್ಲವಿಯವರ** ವಿವಾಹವು ತಾ. 23–12–2024ನೇ ಸೋಮವಾರ ಬೆಳ್ತಂಗಡಿ 'ಸುಬ್ರಹ್ಮಣ್ಯ ಸ್ಥಾನಿಕ ಸಭಾಭವನ'ದಲ್ಲಿ ನಡೆಯಿತು.

❖ ❖ ❖ ❖

ಶ್ರೀಮತಿ ಕವಿತಾ ಮತ್ತು ಶ್ರೀ ಮಹಾದೇವ ರಾವ್ ಇವರ ಪುತ್ರಿ **ಚಿ| ಸೌ| ಕಾವ್ಯ** ಹಾಗೂ ದಿ| ಶರತ್ ಕುಮಾರ್ ನೆಲ್ಲಿಕುಂಜೆ ಮತ್ತು ಶ್ರೀಮತಿ ಸುಕನ್ಯಾ ಇವರ ಪುತ್ರ **ಚಿ| ಸ್ವಸ್ತಿಕ್** ಇವರ ವಿವಾಹವು ತಾರೀಕು 20–12–2024ನೇ ಶುಕ್ರವಾರ ಉಡುಪಿಯ 'ಸರಸ್ವತಿ ಸಭಾಭವನ'ದಲ್ಲಿ ನಡೆಯಿತು.

❖ ❖ ❖ ❖

ಶ್ರೀ ಗುರುರಾಜ್ ರಾವ್ ಮತ್ತು ಶ್ರೀಮತಿ ರಮ್ಯಾ ಮರಕಂಜೆ ಇವರ ಪುತ್ರಿ **ಚಿ| ಸೌ| ಮೇಘನಾ** ಹಾಗೂ ಶ್ರೀ ರಾಜ್‌ಕುಮಾರ್ ಮತ್ತು ಶ್ರೀಮತಿ ಪ್ರತಿಮಾ ಇವರ ಪುತ್ರ **ಚಿ| ಅಭಿಜಿತ್** ಇವರ ವಿವಾಹವು ತಾ. 22–12–2024ನೇ ರವಿವಾರ ಸುಳ್ಯದ 'ಕಸ್ತೂರಿ ಅಚ್ಯುತ ಭಟ್ ಶಶಿಕಲಾ ಕಲಾಮಂದಿರ'ದಲ್ಲಿ ನಡೆಯಿತು.

❖ ❖ ❖ ❖

ಶ್ರೀ ಸುಧಾಕರ್ ರಾವ್ ಮತ್ತು ಶ್ರೀಮತಿ ನಂದಿನಿ ವಾಮಂಜೂರು ಪುತ್ರಿ **ಚಿ| ಸೌ| ಸುಪ್ರೀತಾ** ಹಾಗೂ ಶ್ರೀ ರಾಧಾಕೃಷ್ಣ ರಾವ್ ಮತ್ತು ಶ್ರೀಮತಿ ಅನಸೂಯ ಇವರ ಪುತ್ರ **ಚಿ| ದ್ವಾರಕನಾಥ** ಇವರ ವಿವಾಹವು ತಾ. 22–12–2024ನೇ ರವಿವಾರ ವಾಮಂಜೂರು 'ರಜತಾದ್ರಿ ಸಭಾಭವನ'ದಲ್ಲಿ ನಡೆಯಿತು.

❖ ❖ ❖ ❖

ಶ್ರೀ ನವೀನ್ ಕುಮಾರ್ ಸಾಂಗ್ಲಿ ಮತ್ತು ಶ್ರೀಮತಿ ಸುಜಾತಾ ಇವರ ಪುತ್ರ **ಚಿ| ಕಾರ್ತಿಕ್** ಹಾಗೂ ಶ್ರೀ ನೀಲೇಶ್ ಗರ್ಡ ಮತ್ತು ಸ್ನೇಹಲ್ ಇವರ ಪುತ್ರಿ **ಚಿ| ಸೌ| ಅದಿತಿ** ಇವರ ವಿವಾಹವು ತಾ. 23–12–2024 ಸೋಮವಾರ ಉಡುಪಿ 'ಶಾರದಾ ಮಂಟಪ'ದಲ್ಲಿ ನಡೆಯಿತು.

❖ ❖ ❖ ❖

ಶ್ರೀ ನಾಗೇಶ ರಾವ್ ಮತ್ತು ಶ್ರೀಮತಿ ಚಂದ್ರಾವತಿ ಉಜಿರೆ ಇವರ ಸುಪುತ್ರಿ **ಚಿ| ಸೌ| ಅಕ್ಷತಾ** ಹಾಗೂ ಶ್ರೀ ಶಿವಾನಂದ ರಾವ್ ಮತ್ತು ಶ್ರೀಮತಿ ವತ್ಸಲಾ ಕಕ್ಕಿಂಜೆ ಇವರ ಸುಪುತ್ರ **ಚಿ| ವಿವೇಕಾನಂದ** ಇವರ ವಿವಾಹ ತಾ. 8–1–2025ನೇ ಬುಧವಾರ ಬೆಳ್ತಂಗಡಿಯ ಧರ್ಮಸ್ಥಳ 'ಶ್ರೀ ಮಂಜುನಾಥ ಸ್ವಾಮಿ ಕಲಾಭವನ'ದಲ್ಲಿ ನಡೆಯಿತು.

# ಸುರತ್ಕಲ್ ಕ್ರಿಕೆಟ್

ಸ್ಥಾನಿಕ ಬ್ರಾಹ್ಮಣ ಸಂಘ ಸುರತ್ಕಲ್ ಯುವ ವೇದಿಕೆಯ ವತಿಯಿಂದ ಸ್ಥಾನಿಕ ಬ್ರಾಹ್ಮಣ ಸಮಾಜದ ಯುವಕರಿಗೆ ಹನ್ನೊಂದನೆಯ ವರ್ಷದ **'ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯಾಟ'** ಪಣಂಬೂರು NMPT ಮೈದಾನದಲ್ಲಿ ತಾ. 09–02–2025ನೇ ಆದಿತ್ಯವಾರ ನಡೆಯಲಿದೆ. ಈ ಪಂದ್ಯಾಟದಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸುತ್ತೇವೆ.

ಪ್ರವೀಣ್ - 9448953331 ಸಂದೀಪ್ - 9844630306 ಕಾರ್ತಿಕ್ - 9591662899


**ಅಧ್ಯಕ್ಷರು ಮತ್ತು ಸದಸ್ಯರು, ಯುವವೇದಿಕೆ,** ಸ್ಥಾನಿಕ ಬ್ರಾಹ್ಮಣ ಸಂಘ, ಸುರತ್ಕಲ್

# ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...




**ಶ್ರೀ ಮೋಹನ್ ದಾಸ್ ರಾವ್** (52) ಇವರು ತಾ. 14–1–2025ನೇ ಮಂಗಳವಾರ ಬೆಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

❀ ❀ ❀



**ಶ್ರೀ ವಾಸುದೇವ ರಾವ್** (90) ತಾ. 8–1–2025, ಬುಧವಾರ ಪೆರ್ಡೂರಿನಲ್ಲಿ ನಿಧನರಾದರು. ಅವರು ಐವರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

❀ ❀ ❀



ನಾರಾವಿ – ಈದು ಗ್ರಾಮದ 'ಕಲ್ಪನಾ' ನಿವಾಸಿ ಹಿರಿಯ ಪುರೋಹಿತರಾದ **ಶ್ರೀಧರ ರಾವ್** (85) ಇವರು ತಾರೀಕು 13–01–2025ನೇ ಸೋಮವಾರ ಮಂಗಳೂರಿನಲ್ಲಿ ನಿಧನರಾದರು. ಶ್ರೀಯುತರು ಪತ್ನಿ, 3 ಗಂಡು ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ.

❀ ❀ ❀



ಮಹಾನಗರ ಪಾಲಿಕೆಯ ಈಜುಕೊಳದಲ್ಲಿ 'ಜೀವರಕ್ಷಕ'ರಾಗಿ ಕರ್ತವ್ಯ ಸಲ್ಲಿಸುತ್ತಿದ್ದ **ಶ್ರೀ ವಿ. ರಾಜೇಂದ್ರ ರಾವ್** ದಿ| ಕೆ. ಸುಬ್ಬರಾವ್ ದಿ| ಡಿ. ಮೂಕಾಂಬಿಕೆ ಇವರ ಪುತ್ರ ದಿನಾಂಕ 10–01–2025ನೇ ಶುಕ್ರವಾರ ಮಣ್ಣಗುಡ್ಡೆಯ ತಮ್ಮ ಸ್ವಗೃಹದಲ್ಲಿ ದೈವಾಧೀನರಾದರು.

❀ ❀ ❀



ಬೆಳ್ತಂಗಡಿ ತಾಲೂಕು ಚಾರ್ಮಾಡಿಯ ಕಲ್ಲಬೆಟ್ಟು **ಶ್ರೀಮತಿ ಶಾಲಿನಿ ಹರೀಶ್ ರಾವ್** ಇವರು ತಾ. 10–12–2024ನೇ ಮಂಗಳವಾರ ದೈವಾಧೀನರಾದರು. ಮೃತರು ಪತಿ, ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

❀ ❀ ❀



**ಶ್ರೀ ಪಿ. ಮೋಹನ್ ರಾವ್** (73) ತಾ. 19–12–2024ನೇ ಗುರುವಾರ ಕೊಡವೂರಿನಲ್ಲಿ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರನ್ನು ಅಗಲಿದ್ದಾರೆ.

❀ ❀ ❀



ಹಿರಿಯಡ್ಕ ಆಳುಗ್ಗೇಲು **ಶ್ರೀ ಶಂಕರ ನಾರಾಯಣ ರಾವ್** (92) ತಾ. 18–12–2024ನೇ ಬುಧವಾರ ನಿಧನರಾದರು. ಅವರು ಐವರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

❀ ❀ ❀




**ಮಾಂಟ್ರಾಡಿ ಮೋಹನ್ ರಾವ್** (78) ತಾ. 27–12–2024ನೇ ಶುಕ್ರವಾರ ಉಡುಪಿಯಲ್ಲಿ ನಿಧನರಾದರು. ಇವರು ಪತ್ನಿ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

❀ ❀ ❀



**ಶ್ರೀ ಇನ್ನಾ ಕೇದಗೆ ಕೃತಿವಾಸ್ ಶರ್ಮ** (80) ತಾ. 23–12–2024ನೇ ಸೋಮವಾರ ಕಾರ್ಕಳದಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

❀ ❀ ❀



ಮುಂಬೈ ಮೀರಾರೋಡ್ **ಶ್ರೀ ಇನ್ನಾಪದವು ರಾಮಸ್ವಾಮಿ** (84) ತಾ. 1–1–2025ನೇ ಬುಧವಾರ ಮಂಗಳೂರಿನಲ್ಲಿ ನಿಧನರಾದರು. ಅವರು ಮೂವರು ಪುತ್ರಿಯರನ್ನು ಅಗಲಿದ್ದಾರೆ.

❀ ❀ ❀



**ವೈ. ಎಂ. ಶ್ರೀಧರ್ ರಾವ್ ಅದಮಾರು** (97) ತಾ. 3–1–2025ನೇ ಶುಕ್ರವಾರ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

❀ ❀ ❀



ಉಡುಪಿಯ **ಶ್ರೀ ಅನಂತಪದ್ಮನಾಭ ರಾವ್** (ಎ. ಪಿ. ರಾವ್) ತಾ. 5–1–2025ನೇ ರವಿವಾರ ನೇರೂಲ್‌ನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

❀ ❀ ❀



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಮಾಜ ಸೇವಾ ಸಂಘ, ಸುಳ್ಯ ಇದರ ನಿಕಟಪೂರ್ವ ಅಧ್ಯಕ್ಷರು, ಹಾಲಿ ಸಂಘದ ನಿರ್ದೇಶಕರು ಆಗಿರುವ ಶ್ರೀ ಗಿರಿಜಾಶಂಕರ ತುದಿಯಡ್ಕ ತಾ. 30–12–2024ನೇ ಸೋಮವಾರ ಶಿವೈಕ್ಯರಾದರು.

# ಅಪಾರಕೀರ್ತಿ ಗಳಿಸಿ



**ಶ್ರೀಮತಿ ಲಾವಣ್ಯ ಸಚಿನ್ ರಾವ್ ಇವರಿಗೆ ಡಾಕ್ಟರೇಟ್** – ಇವರ ಕೆಮೆಸ್ಟ್ರಿಯಲ್ಲಿ "ಸಿಂಥೆಸಿಸ್ ಆಫ್ ನ್ಯಾನೋ ಮೆಟೀರಿಯಲ್ ಆ್ಯಂಡ್ ದೇರ್ ಅಪ್ಲಿಕೇಶನ್ ಆನ್ ಬಯೋ ಸೆನ್ಸಾರ್" ಎಂಬ ಥಿಯರಿ ಬಗ್ಗೆ ಎನ್‌ಐಟಿಕೆ ಸುರತ್ಕಲ್ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಇವರು ತಮ್ಮ ಗುರುಗಳಾದ ಪ್ರೊ. ಬಿ. ರಾಮಚಂದ್ರ ಭಟ್ ಇವರ ಮಾರ್ಗದರ್ಶನದಲ್ಲಿ ಈ ಪ್ರಬಂಧವನ್ನು ಮಂಡಿಸಿದರು. ಇವರು ಪುತ್ತೂರಿನ ವಾಟೆ ಶ್ರೀ ರವೀಂದ್ರ ಹೆಚ್. ವಿ. ಮತ್ತು ಶ್ರೀಮತಿ ವಸುಂಧರಾ ರಾವ್ ಇವರ ಮಗಳು ಹಾಗೂ ಅದ್ಯಪಾಡಿ ಶ್ರೀ ಚಂದ್ರಶೇಖರ ರಾವ್ ಮತ್ತು ಶ್ರೀಮತಿ ಸುಧಾ ಇವರ ಸೊಸೆ. ಇವರು ಅದ್ಯಪಾಡಿ ಶ್ರೀ ಸಚಿನ್ ರಾವ್ ಇವರ ಪತ್ನಿ.

❋ ❋ ❋



ಪುತ್ತೂರಿನ ಶ್ರೀ ಮೋಹನ್‌ದಾಸ್ ಪಿಲಿಂಜ ಮತ್ತು ಶ್ರೀಮತಿ ಗಾಯತ್ರಿಯವರ ಪುತ್ರಿ **ಡಾ। ಗಾನ** ಅವರು ಭರತನಾಟ್ಯ ವಿದ್ವತ್ ಅಂತಿಮ ಪರೀಕ್ಷೆಯನ್ನು ಉತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ. ಇವಳು ವಿದುಷಿ ಡಾ। ಶ್ರುತಿ ರೋಶನ್ ಬೆಳ್ಳೂರು ಇವರ ಶಿಷ್ಯೆ.

❋ ❋ ❋



ಶ್ರೀ ಅನಿಲ್ ರಾವ್ ಬಿ.ಎಸ್. ಹಾಗೂ ಶ್ರೀಮತಿ ಭಾರತಿ ಎ. ರಾವ್ ಇವರ ಪುತ್ರಿ **ಕು। ಪ್ರಾರ್ಥನಾ ರಾವ್** ಭರತನಾಟ್ಯ ವಿದ್ವತ್ ಅಂತಿಮ ಪರೀಕ್ಷೆಯನ್ನು ಉನ್ನತ ಅಂಕಗಳಿಸಿ ಉತ್ತೀರ್ಣಳಾಗಿದ್ದಾಳೆ. ಇವಳು ವಿದುಷಿ ಶ್ರೀಮತಿ ಕಮಲಾ ಭಟ್ ಮತ್ತು ವಿದುಷಿ ಶ್ರೀಮತಿ ವಿನಯಾ ಭಟ್ ಇವರ ಶಿಷ್ಯೆಯಾಗಿದ್ದಾಳೆ.

❋ ❋ ❋



ಶ್ರೀ ಹೇಮಂತ್ ಮಂಕುಡೆ ಮತ್ತು ಶ್ರೀಮತಿ ಭಾಗ್ಯಲಕ್ಷ್ಮೀ ಇವರ ಪುತ್ರಿ **ಕು। ದಿವ್ಯಾ ರಾವ್** ಈ ಬಾರಿಯ ಭರತನಾಟ್ಯ ಜೂನಿಯರ್ ವಿಭಾಗದಲ್ಲಿ ಉನ್ನತ ಅಂಕಪಡೆದು ತೇರ್ಗಡೆ ಹೊಂದಿದ್ದಾಳೆ.



ಕರ್ನಾಟಕ ರಾಜ್ಯ ಡಾ। ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯ, ಮೈಸೂರು ಇವರು ಇತ್ತೀಚೆಗೆ ನಡೆಸಿದ ಭರತನಾಟ್ಯ ಜೂನಿಯರ್ ಹಂತದ ಪರೀಕ್ಷೆಯಲ್ಲಿ ಮೂಲ್ಕಿ ಚಿತ್ರಾಪು ಶ್ರೀ ಪುಷ್ಪರಾಜ್ ರಾವ್ (ಪುರೋಹಿತರು) ಹಾಗೂ ಶ್ರೀಮತಿ ಸಾವಿತ್ರಿ ಇವರ ಮಗಳು **ಕು। ಪೂರ್ವಿ** ಇವಳು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ.

❋ ❋ ❋



ಡಾ। ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯ, ಮೈಸೂರು ಇವರು ನಡೆಸಿದ ಭರತನಾಟ್ಯ ಸೀನಿಯರ್ ಗ್ರೇಡ್ ಪರೀಕ್ಷೆಯಲ್ಲಿ ಮಂಗಳೂರಿನ ಯೆಯ್ಯಾಡಿಯಲ್ಲಿರುವ ಹಳೆಯಂಗಡಿ ಶ್ರೀ ಗಣೇಶ್ ಭಟ್ ಮತ್ತು ಶ್ರೀಲತಾ ಜಿ. ಭಟ್ ಇವರ ಪುತ್ರಿ **ಕು। ಸಮನ್ವಿತಾ ಜಿ. ಭಟ್** ಇವರು ಶೇ. 85% ಅಂಕಗಳೊಂದಿಗೆ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣಳಾಗಿರುತ್ತಾಳೆ. ಕರ್ನಾಟಕ ಶಾಸ್ತ್ರೀಯ ಸಂಗೀತ ಸೀನಿಯರ್ ಗ್ರೇಡ್ ಪರೀಕ್ಷೆಯನ್ನು ಮತ್ತು B.Com. ಪದವಿಯನ್ನು ಮುಗಿಸಿರುವ ಈಕೆ ಕದ್ರಿ ನೃತ್ಯ ವಿದ್ಯಾನಿಲಯದ ನೃತ್ಯಗುರುಗಳಾದ ವಿದ್ವಾನ್ ಯು. ಕೆ. ಪ್ರವೀಣ್ ಹಾಗೂ ಸಂಗೀತ ಗುರುಗಳಾದ ವಿದುಷಿ ಉಷಾ ಪ್ರವೀಣ್ ಇವರ ಶಿಷ್ಯೆ.

❋ ❋ ❋



ಕರ್ನಾಟಕ ರಾಜ್ಯ ಡಾ। ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯ, ಮೈಸೂರು ಇವರು ಇತ್ತೀಚೆಗೆ ನಡೆಸಿದ ಭರತನಾಟ್ಯ ಸೀನಿಯರ್ ಹಂತದ ಪರೀಕ್ಷೆಯಲ್ಲಿ ಕಾಟುಕುಕ್ಕೆ ರಾಮಕೃಷ್ಣ ರಾವ್ ಹಾಗೂ ಶ್ರೀಮತಿ ಉಮಾ ರಾವ್ ಇವರ ಪುತ್ರಿ **ಕು। ಕವನ** ಇವಳು ಡಿಸ್ಟಿಂಕ್ಷನ್ ಗಳಿಸಿ ಉತ್ತೀರ್ಣಳಾಗಿದ್ದಾಳೆ.

❋ ❋ ❋



ಕರ್ನಾಟಕ ರಾಜ್ಯ ಡಾ। ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯ, ಮೈಸೂರು ಇದರ ವತಿಯಿಂದ ಇತ್ತೀಚೆಗೆ ನಡೆಸಿದ ಕರ್ನಾಟಕ ಸಂಗೀತ ಜೂನಿಯರ್ ಹಂತದ ಪರೀಕ್ಷೆಯಲ್ಲಿ ಬೆಂಗಳೂರಿನ ತುಂಗಾ ನಗರದ ಶ್ರೀಮತಿ ಸರಿತಾ ಮತ್ತು ಶ್ರೀ ಸಂತೋಷ್ ಕಡಬ ಇವರ ಸುಪುತ್ರಿ **ಕು। ಅನ್ವಿತಾ ರಾವ್ ಕಡಬ** ಇವಳು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ.




PREETHIKA AUTOMOBILES
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
2493633
9845851573
Dealers in :
Minda Switches, M. K. Products, Swiss Auto Products, Power Coils

Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services

1st Floor, Bharath Building, P. M. Rao Road, Hampankatta, Mangaluru - 575 001


ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ರೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

ಪತ್ರಿಕೆಗೆ ಶುಭ ಬಯಸುವ–

ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles,
A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

ರಾಮಾ ಆಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್ ವಾರ್ಷಿಕ ಮಹಾಸಭೆ 2023–24ರ ವರದಿ

ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್ ಇದರ ವಾರ್ಷಿಕೋತ್ಸವವು ದಿನಾಂಕ 10–11–2024ನೇ ರವಿವಾರ ಸುರತ್ಕಲ್‌ನ ವಿದ್ಯಾದಾಯಿನಿ ಪ್ರೌಢಶಾಲೆಯ ವಜ್ರಮಹೋತ್ಸವ ಸಭಾಂಗಣದಲ್ಲಿ ನಡೆಯಿತು.

ವಾರ್ಷಿಕ ಮಹಾಸಭೆಯು ಬೆಳಗ್ಗೆ ಗಂಟೆ 9–30ಕ್ಕೆ ಸರಿಯಾಗಿ ಗೌರವಾಧ್ಯಕ್ಷರಾದ ಶ್ರೀ ಭವಾನಿಶಂಕರ್ ರಾವ್, ಅಧ್ಯಕ್ಷರಾದ ಶ್ರೀ ರಾಘವೇಂದ್ರ ರಾವ್ ಸಿ., ಉಪಾಧ್ಯಕ್ಷರುಗಳಾದ ಶ್ರೀ ವಾಸುದೇವ ಶಾನುಬೋಗ್ ಮತ್ತು ಶ್ರೀಮತಿ ಪರಿಮಳ ಪ್ರಶಾಂತ್, ಕಾರ್ಯದರ್ಶಿ ಶ್ರೀ ಫಾಲಚಂದ್ರ ಶರ್ಮಾ, ಕೋಶಾಧಿಕಾರಿ ರಾಧಾಕೃಷ್ಣ ರಾವ್, ಯುವವೇದಿಕೆ ಹಾಗೂ ಮಹಿಳಾ ವೇದಿಕೆ ಅಧ್ಯಕ್ಷರುಗಳಾದ ಶ್ರೀ ಸಂದೀಪ್ ಶಾನುಭಾಗ್ ಮತ್ತು ಶ್ರೀಮತಿ ಸುನಿತಾ ಶ್ರೀಕಾಂತ್ ಇವರ ಉಪಸ್ಥಿತಿಯಲ್ಲಿ ಪ್ರಾರಂಭವಾಯಿತು.

ಕುಮಾರಿ ಸಂಜನಾರವರು ಪ್ರಾರ್ಥನೆಯನ್ನು ಹಾಡಿದರು. ಅಧ್ಯಕ್ಷರಿಂದ ಸ್ವಾಗತವಾದ ಬಳಿಕ ನಮ್ಮ ಸಮಾಜದ ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಸಂಘದ ವರದಿಯನ್ನು ಕಾರ್ಯದರ್ಶಿಗಳು ಹಾಗೂ ಲೆಕ್ಕಪತ್ರವನ್ನು ಕೋಶಾಧಿಕಾರಿಗಳು ಮಂಡಿಸಿ ಮಂಜೂರಾತಿಯನ್ನು ಪಡೆಯಲಾಯಿತು. ಆಜೀವ ಸದಸ್ಯತನದ ಶುಲ್ಕವನ್ನು ಪರಿಷ್ಕರಿಸಿ ಸದಸ್ಯರಿಂದ ಮಂಜೂರಾತಿ ಪಡೆಯಲಾಯಿತು. ಕಾರ್ಯದರ್ಶಿಯವರು ಧನ್ಯವಾದಗಳನ್ನು ಅರ್ಪಿಸುವುದರೊಂದಿಗೆ ವಾರ್ಷಿಕ ಮಹಾಸಭೆಯು ಮುಕ್ತಾಯವಾಯಿತು.

ಅನಂತರ ನಡೆದ ಹಿರಿಯರು ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಶ್ರೀ ಬಿ.ಹೆಚ್. ವಾಸುದೇವ ಪ್ರಸಾದ್ (ಎಕ್ಸಿಕ್ಯೂಟಿವ್ ಡೈರೆಕ್ಟರ್, ಪ್ರಾಜೆಕ್ಟ್ ಆಂಡ್ ಮಾರ್ಕೆಟಿಂಗ್, ಎಂ.ಆರ್.ಪಿ.ಎಲ್.), ವಿಶ್ವಸ್ಥಾನಿಕ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಕೆ. ಮಂಜುನಾಥ್ ಹೆಬ್ಬಾರ್, ಪಡುಬಿದ್ರೆ ಸ್ಥಾನಿಕ ಸಂಘದ ಸಂಚಾಲಕರಾದ ಶ್ರೀ ಕೆ. ದಿವಾಕರ್ ರಾವ್ ಸುರತ್ಕಲ್, ಸಂಘದ ಗೌರವಾಧ್ಯಕ್ಷರಾದ ಶ್ರೀ ಭವಾನಿಶಂಕರ್ ರಾವ್, ಅಧ್ಯಕ್ಷರಾದ ಶ್ರೀ ರಾಘವೇಂದ್ರ ರಾವ್ ಸಿ., ಉಪಾಧ್ಯಕ್ಷರುಗಳಾದ ಶ್ರೀ ವಾಸುದೇವ್ ಶಾನುಭೋಗ್, ಶ್ರೀಮತಿ ಪರಿಮಳ ಪ್ರಶಾಂತ್, ಯುವ ಹಾಗೂ ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀ ಸಂದೀಪ್ ಶಾನುಭೋಗ್ ಮತ್ತು ಶ್ರೀಮತಿ ಸುನಿತಾ ಶ್ರೀಕಾಂತ್ ಉಪಸ್ಥಿತರಿದ್ದರು.

ಕುಮಾರಿ ಅಭಿಜ್ಞಾ ಇವರ ಪ್ರಾರ್ಥನೆಯ ಬಳಿಕ ಸಂಘದ ಅಧ್ಯಕ್ಷರಾದ ಶ್ರೀ ರಾಘವೇಂದ್ರ ರಾವ್ ಸಿ. ಇವರು ನೆರೆದ ಎಲ್ಲಾ ಗಣ್ಯರನ್ನು, ಸಭಿಕರನ್ನು ಸ್ವಾಗತಿಸಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರಿಂದ ದೀಪಪ್ರಜ್ವಲನೆಯ ಬಳಿಕ, ರಾಷ್ಟ್ರಪ್ರಶಸ್ತಿ ವಿಜೇತ ಶ್ರೀ ಬಿ. ಕೆ. ದೇವರಾವ್, ಹತ್ತು ವರ್ಷಗಳ ದೀರ್ಘಕಾಲ ಸಂಘದ ಅಧ್ಯಕ್ಷರಾಗಿದ್ದ



ಶ್ರೀ ಕೆ. ಮಾಧವ ರಾವ್, ಉಡುಪಿ ನಗರಸಭಾ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀಮತಿ ರಜನಿ ಹೆಬ್ಬಾರ್ ಇವರುಗಳ ಅಭಿನಂದನಾ ಪತ್ರವನ್ನು ವಾಚಿಸಿ, ಗೌರವಿಸಲಾಯಿತು. ಮುಖ್ಯ ಅತಿಥಿಗಳಾದ ಶ್ರೀ ಬಿ.ಹೆಚ್. ವಾಸುದೇವ್ ಪ್ರಸಾದ್ ಅವರು ಎಂ.ಆರ್.ಪಿ.ಎಲ್. ಕಂಪನಿ ನಡೆದುಬಂದ ಹಾದಿ ಅದರ ಉತ್ಪಾದನೆ, ವಿದ್ಯಾರ್ಥಿಗಳಿಗೆ ವೃತ್ತಿ ಕೌಶಲ್ಯಕ್ಕೆ ಬೇಕಾದ ಸೂತ್ರಗಳ ಬಗ್ಗೆ ಮಾತನಾಡಿ, ಯುವಕರಿಗೆ ಮಾರ್ಗದರ್ಶನ ನೀಡಿದರು. ಸ್ಥಾನಿಕ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಕೆ. ಮಂಜುನಾಥ್ ಹೆಬ್ಬಾರ್ ಅವರು ಮಹಾಮಂಡಲದ ಸಾಧನೆ ಹಾಗೂ ಮುಂದಿನ ಯೋಜನೆಗಳ ಬಗ್ಗೆ ತಿಳಿಸಿ ಎಲ್ಲರ ಸಹಕಾರವನ್ನು ಕೋರಿದರು. ಪಡುಬಿದ್ರೆ ಸಂಘದ ಸಂಚಾಲಕರಾದ ಶ್ರೀ ದಿವಾಕರ್ ರಾವ್, ತಮ್ಮ ಮಾತಿನಲ್ಲಿ ನಮ್ಮ ಸಮಾಜದ ಜನಸಂಖ್ಯೆ ಹಾಗೂ ಸಂಘಗಳ ನಡುವಿನ ಸಹಕಾರ, ಬಾಂಧವ್ಯದ ಬಗ್ಗೆ ತಿಳಿಸಿ, ಸುರತ್ಕಲ್ ಸಂಘದ ಬಗ್ಗೆ ಮೆಚ್ಚುಗೆ ತಿಳಿಸಿದರು. ಅನಂತರ ನಮ್ಮ ಸಂಘದ ಸದಸ್ಯರ ಮಕ್ಕಳಿಗೆ ಸಂಘದ ವತಿಯಿಂದ ಹಾಗೂ ದಾನಿಗಳ ಸಹಾಯದಿಂದ ಕೊಡಲ್ಪಡುವ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ಸಂಘದ ಅಧ್ಯಕ್ಷರ ಭಾಷಣದ ಬಳಿಕ ಉಪಾಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಶ್ರೀ ಶಶಿಧರ್ ರಾವ್, ಚಿತ್ರಾಪು ಇವರ ನಿರ್ದೇಶನದಲ್ಲಿ ಯುವ ಹಾಗೂ ಮಹಿಳಾ ವೇದಿಕೆಯ ಸದಸ್ಯರಿಂದ ಯಕ್ಷಗಾನ ಬಯಲಾಟ 'ಶ್ರೀದೇವಿ ಕೌಶಿಕೆ' ಪ್ರದರ್ಶನಗೊಂಡಿತು. ನಾಲ್ಕು ವರ್ಷದ ಕಂದಮ್ಮಗಳಿಂದ ಅರವತ್ತು ವರ್ಷದ ಹಿರಿಯರು ಪಾತ್ರಧಾರಿಗಳಾಗಿದ್ದ ಈ ಯಕ್ಷಗಾನವು, ಆಬಾಲ ವೃದ್ಧರಾದಿಯಾಗಿ ಎಲ್ಲ ಸಭಿಕರ ಮನಸೂರೆಗೊಳಿಸಿ ಮೆಚ್ಚುಗೆಯನ್ನು ಪಡೆಯಿತು.

ಕಾರ್ಯಕ್ರಮವನ್ನು ಶ್ರೀಮತಿ ಸುಧಾಮಣಿ ಫಾಲಚಂದ್ರ ಇವರು ಅಚ್ಚುಕಟ್ಟಾಗಿ ನಿರೂಪಿಸಿದರು. ಪ್ರವೀಣ್ ಕುಮಾರ್ ಮಲ್ಲಮಾರ್ ತಂಡದವರ ಮಧ್ಯಾಹ್ನದ ಶುಚಿ–ರುಚಿಯಾದ ಭೋಜನದ ಸವಿ ಹಾಗೂ ಯಕ್ಷಗಾನದ ಮಧುರತೆ ಎಲ್ಲಾ ಬಂಧುಗಳು ಕಾರ್ಯಕ್ರಮವನ್ನು ಮೆಚ್ಚುಗೆಯಿಂದ ಕೊನೆಯವರೆಗೆ ವೀಕ್ಷಿಸುವಂತೆ ಪ್ರೇರೇಪಿಸಿತು.

Prop: Somashekhar
Mob: 9844551244

WONDER CREATION
Decor & Event planners

Our Services :-
- Corporate Events
- All Types Of Stage Decoration
- Sounds And Lights
- Led Wall Rentals
- Selfie Booth Concept
- Shamiyana/Tint Sheet/Plat Form Chairs/Round Table etc....
- Photography & Videography

2T-145-3A, Kulai Gudde Road, Kulai, Surathkal

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ದ್ರುವ್

ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical,
Plumbing and Sanitary works

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಾರ್ಷಿಕೋತ್ಸವ







ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕೋತ್ಸವವು ತಾ. 29–12–2024ರಂದು ನಡೆಯಿತು. ಶ್ರೀ ಶಾರದಾಂಬ ಭಜನಾ ಮಂಡಳಿಯ ಭಜನಾ ಸೇವೆಯ ಬಳಿಕ ಶ್ರೀ ಸತ್ಯನಾರಾಯಣ ಪೂಜಾ ಸಂಕಲ್ಪವನ್ನು ವೇ। ಮೂ। ಪಾವಂಜೆ ಸುಬ್ರಹ್ಮಣ್ಯ ಭಟ್‌ರವರು ಯಜಮಾನರಾದ ಶ್ರೀ ಸಾಯಿಪ್ರಸಾದ್ ಮತ್ತು ಶ್ರೀಮತಿ ಪ್ರಸಿದ್ಧ ದಂಪತಿಗಳ ಮೂಲಕ ನೆರವೇರಿಸಿದರು. ಅಡಿಗೆ, ಹೂ ಜೋಡಣೆ ಮತ್ತು ರಂಗೋಲಿ ಸ್ಪರ್ಧೆಗಳು ವಿವಿಧ ವಿಭಾಗಗಳಲ್ಲಿ ನಡೆದವು. ಬೆಳಗ್ಗೆ 11–00 ಗಂಟೆಗೆ ಶ್ರೀ ಸಭಾದ 115ನೇ ವರ್ಷದ 'ಮಹಾಸಭೆ' ಆರಂಭವಾಯಿತು. ಪ್ರಾರ್ಥನೆ ಬಳಿಕ ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಸರ್ವರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ 2023–24ನೇ ವರ್ಷದ ಆಡಳಿತ ಮಂಡಳಿಯ ವರದಿಯನ್ನು ಮಂಡಿಸಿ ಅನುಮೋದನೆ ಪಡೆದರು. ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಪರಿಶೋಧಿತ ಲೆಕ್ಕಪತ್ರ ಮತ್ತು ಆಡಿಟ್ ವರದಿಯನ್ನು ಹಾಗೂ ಮುಂದಿನ ವರ್ಷದ ಅಂದಾಜು ಆಯ–ವ್ಯಯ ಪಟ್ಟಿಯನ್ನು ಮಂಡಿಸಿ ಅನುಮೋದನೆ ಪಡೆದರು. ಅದೇ ರೀತಿ ಶ್ರೀ ಸುಬ್ರಹ್ಮಣ್ಯ ಸಭಾ ಟ್ರಸ್ಟ್‌ನ ಲೆಕ್ಕಪತ್ರಗಳನ್ನು ಮಂಡಿಸಲಾಯಿತು. ಮಂಗಳೂರಿನ ಪ್ರಖ್ಯಾತ ವೈದ್ಯರಾದ ಡಾ. ಬಿ.ಎಚ್. ಕೃಷ್ಣಮೂರ್ತಿ ಮತ್ತು ಡಾ. ಟಿ. ರಾಧಾಕೃಷ್ಣ ರಾವ್ ಇವರನ್ನು ಸನ್ಮಾನಿಸಲಾಯಿತು. ಮುಂದಿನ ಮೂರು ವರ್ಷಗಳಿಗೆ 25 ಜನರ ಆಡಳಿತ ಮಂಡಳಿಯನ್ನು ಚುನಾಯಿಸಲಾಯಿತು. ಉಪಾಧ್ಯಕ್ಷರಾದ ಡಾ। ಎ. ಪಿ. ಕೃಷ್ಣ ವಂದನಾರ್ಪಣೆ ಬಳಿಕ ಮಹಾಮಂಗಳಾರತಿ, ಪ್ರಸಾದ ವಿತರಣೆ ನಡೆಯಿತು. ಮಧ್ಯಾಹ್ನ ಬಳಿಕ ಡಾ. ರಂಜಿತಾರವರು 'ರಕ್ತದಾನದ ಮಹತ್ವ' ಬಗ್ಗೆ ಉಪನ್ಯಾಸ ನೀಡಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಮತಿ ಅನುರಾಧಾ ಕಿಶೋರ್ ನಿರ್ದೇಶನದ ಸಮೂಹ ನೃತ್ಯ, ವೈಯಕ್ತಿಕ ನೃತ್ಯಗಳು ಮತ್ತು ಶ್ರೀರಾಮ್ ಎಲ್ಲಂಗಳ ನಿರ್ದೇಶನದ ತುಳು ಹಾಸ್ಯ ಪ್ರದರ್ಶನ ನಡೆಯಿತು. ಶ್ರೀ ರಘುವೀರ್ ಪೆರ್ಡೂರು ಇವರು ಕಾರ್ಯಕ್ರಮದ ಫೋಟೋ ಮತ್ತು ವೀಡಿಯೋ ಒದಗಿಸಿ ಸಹಕರಿಸಿದರು. ಯುವವೇದಿಕೆ ಅಧ್ಯಕ್ಷ ಶ್ರೀ ಅನಿಲ್ ನೆಲ್ಲಿಕುಂಜೆ ಮತ್ತು ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ಶ್ರೀಮತಿ ಪುಷ್ಪಾ ಶ್ರೀನಿವಾಸ್ ವ್ಯವಸ್ಥೆಯಲ್ಲಿ ಸಹಕರಿಸಿದರು. ತೀರ್ಪುಗಾರರಾಗಿ ಶ್ರೀ ರಘುವೀರ್ ಪೆರ್ಡೂರು, ಶ್ರೀಮತಿ ಸುಜಾತಾ ಬೆಳ್ಳೆ, ಶ್ರೀಮತಿ ಶ್ರೀಲತಾ ಜಯಪ್ರಕಾಶ್ ಸಹಕರಿಸಿದರು. ಶ್ರೀ ಪಿ. ಶ್ರೀಕಾಂತ್ ರಾವ್ ಮತ್ತು ಯುವವೇದಿಕೆ ಉಪಾಧ್ಯಕ್ಷ ಶ್ರೀ ಸುರೇಶ್ ಕಡಬ ಕಾರ್ಯಕ್ರಮ ನಿರೂಪಿಸಿದರು. ಬಹುಮಾನ ವಿತರಣೆ, ಧನ್ಯವಾದ, ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. *ಛಾಯಾಚಿತ್ರ :* ***ರಘುವೀರ್ ಪೆರ್ಡೂರು***












**ಶ್ರೀ ಸಭಾ ವಾರ್ಷಿಕೋತ್ಸವ ಸ್ಪರ್ಧಾ ವಿಜೇತರು : ಅಡುಗೆ ಸ್ಪರ್ಧೆ :**


**ಸಿಹಿ ವಿಭಾಗ :** 1. ಸುನೀಲ ಭುಜಂಗ ರಾವ್ 2. ಲಲಿತಾ ಜೆ. ರಾವ್ 3. ಸುಜಾತಾ ರಾವ್

**ಖಾರ ವಿಭಾಗ :** 1. ಸುನೀಲ ಭುಜಂಗ ರಾವ್ 2. ಸುಜಾತಾ ರಾವ್ 3. ಸರೋಜಾ ಜಿ. ರಾವ್

**ಹೂಜೋಡಣೆ :** 1. ಲಲಿತಾ ಜೆ. ರಾವ್ 2. ಪುಷ್ಪಾ ಶ್ರೀನಿವಾಸ್ 3. ರತ್ನಾ ಶ್ರೀಧರ್.

**ರಂಗೋಲಿ ಸ್ಪರ್ಧೆ :** 1. ವಸಂತಿ ಶಂಕರ್ ರಾವ್ 2. ಜಯಂತಿ ದ್ವಾರಕನಾಥ್ 3. ಸುನೀಲ ಭುಜಂಗ ರಾವ್

## ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿ ನಿಲಯಕ್ಕೆ ಏಣಿ ಕೊಡುಗೆ



*ವರದಿ : ಸುಮಂಗಲ ಪ್ರಭಾಕರ್*

ಪುತ್ತೂರಿನ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯಕ್ಕೆ ಅಗತ್ಯವಿದ್ದ ಏಣಿಯನ್ನು ಲೆಫ್ಟಿನೆಂಟ್ ಕರ್ನಲ್ ಶ್ರೀ ವರುಣ್ ರಾವ್, ತೇಜಸ್ವಿನಿ ವರುಣ್ ರಾವ್, ಪುತ್ರ ವಿವಾನ್ ರಾವ್ ನೀಡಿರುವರು. ಸದನದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀಮತಿ ಸುಮಾ ಕೃಷ್ಣ ಸ್ವೀಕರಿಸಿದರು. ಶ್ರೀ ವಿಜಯ ಕುಮಾರ್ ಪತ್ನಿ ಶ್ರೀಮತಿ ಶಕುಂತಲಾ ವಿಜಯ್ ಕುಮಾರ್ ಉಪಸ್ಥಿತರಿದ್ದರು. ಅವರಿಗೆ ಶಿವಸದನದ ಪರವಾಗಿ ಕೃತಜ್ಞತೆಗಳು.

## ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿ ನಿಲಯಕ್ಕೆ ಹಣ್ಣುಹಂಪಲು ವಿತರಣೆ



ಬೆಳ್ತಂಗಡಿ ನಿವಾಸಿ 'ಅರ್ಪಿತಾ ಕ್ಲಿನಿಕ್'ನ ಡಾ. ಗೋಪಾಲಕೃಷ್ಣ ಭಟ್ ಮತ್ತು ಕುಟುಂಬದವರು ಪುತ್ತೂರು ಹಿರಿಯ ನಾಗರಿಕರ ಮತ್ತು ವಿಶೇಷಚೇತನರ ವಸತಿನಿಲಯಕ್ಕೆ ಶ್ರೀ ಸತ್ಯಸಾಯಿ ಬಾಬಾರವರ 99ನೇ ಹುಟ್ಟುಹಬ್ಬದ ಪ್ರಯುಕ್ತ ಎಲ್ಲರಿಗೂ ಹಣ್ಣು–ಹಂಪಲುಗಳನ್ನು ವಿತರಿಸಿದರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಧನ್ಯವಾದಗಳು.

*ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*

# ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ನೂತನ ಆಡಳಿತ ಮಂಡಳಿ

ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ಮಹಾಸಭೆ ತಾ. 29-12-2024 ರಂದು ನಡೆದು, ಮಧ್ಯಾಹ್ನ ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ನೂತನ ಅಧ್ಯಕ್ಷರಾಗಿ ಡಾ. ಎ. ಪಿ. ಕೃಷ್ಣ, ಉಪಾಧ್ಯಕ್ಷರುಗಳಾಗಿ ಶ್ರೀಮತಿ ಸುಮಂಗಲಾ ಪ್ರಭಾಕರ್ ಮತ್ತು ಶ್ರೀ ಇನ್ನ ಚಂದ್ರಕಾಂತ ರಾವ್, ಕಾರ್ಯದರ್ಶಿಗಳಾಗಿ ಶ್ರೀ ಉದಯ ಕುಮಾರ್ ಪಿ., ಜೊತೆ ಕಾರ್ಯದರ್ಶಿಗಳಾಗಿ ಶ್ರೀ ಚೇತನ ಶರ್ಮ ಮತ್ತು ಶ್ರೀ ಸಂತೋಷ್ ಕುಮಾರ್ ಯು., ಕೋಶಾಧಿಕಾರಿಯಾಗಿ ಶ್ರೀ ಪಿ. ಶ್ರೀಕಾಂತ್ ರಾವ್ ಆಯ್ಕೆಯಾದರು. ಪ್ರಸ್ತುತ ನಿರ್ದೇಶಕ ಮಂಡಳಿಯಲ್ಲಿದ್ದ ಎಲ್ಲಾ ಸದಸ್ಯರು ಹೊಸ ನಿರ್ದೇಶಕ ಮಂಡಳಿಯಲ್ಲಿ ಸದಸ್ಯರಾಗಿ ಮುಂದುವರಿಯುತ್ತಾರೆ.



ಛಾಯಾಚಿತ್ರ : ರಘುವೀರ್ ಪೆರ್ಡೂರು






Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* *Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor :* *Sri M. S. Raghunath Rao, Darbe, Puttur* *Printed at :* *Rajesh Power Press, Darbe - 574 202, Puttur, D. K.*